ಗಮನ ಹರಿಸಿದ್ದೇವೆ. ಖಂಡಿತವಾಗಿಯೂ ಒಂದು ವ್ಯವಸ್ಥೆಯನ್ನು ಬದಲಿ ಮಾಡುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಜೆ.ಟಿ. ಪಾಟೀಲ್: ಬಾಲ ಸಂಜೀವಿನಿಗೆ ಇನ್ನೂ ಎಷ್ಟು ಬಾಕಿ ಕೊಡಬೇಕಾಗಿದೆ, ಎಷ್ಟು ದಿವಸಗಳಲ್ಲಿ ಅದನ್ನು ಪೂರ್ತಿ ಮಾಡುತ್ತೀರಿ?

ಶ್ರೀಮತಿ ಉಮಾಶ್ರೀ: ಇದರ ಬಗ್ಗೆ ತಾವು ಇನ್ನೊಂದು ಪ್ರಶ್ನೆಯಲ್ಲಿ ಕೇಳಿ. ನಾನು ನಿಮಗೆ ಮಾಹಿತಿಯನ್ನು ಒದಗಿಸುತ್ತೇನೆ.

ಉಪಾಧ್ಯಕ್ಷರು: ಈಶ್ವರ ಭೀಮಣ್ಣ ಖಂಡ್ರೆ, ಇಲ್ಲಾ, ದತ್ತಾತ್ರೇಯ ಪಾಟೀಲ್ ರೇವೂರ್, ಇಲ್ಲಾ, ರಾಜೀವ್ ಪಿ, ಇಲ್ಲಾ. ನಾಗೇಂದ್ರ ಬಿ. ಇಲ್ಲಾ, ನರೇಂದ್ರ ಆರ್ ನೀವು ಪ್ರಶ್ನೆ ಕೇಳಿ.

ಉದ್ಯೋಗ ಖಾತ್ರಿ ಯೋಜನೆ

94(876); ಶ್ರೀ ನರೇಂದ್ರ ಆರ್ (ಹನೂರು)

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿ ಕೈಗೊಂಡಿರುವ ಕಾಮಗಾರಿಗಳೆಷ್ಟು; (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಕಳೆದ 2 ವರ್ಷಗಳಿಂದ ಈ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳ ವಿಧಾನ ಸಭಾ ಕ್ಷೇತ್ರವಾರು ವಿವರಗಳು ಕೆಳಕಂಡಂತಿದೆ.

ಕ್ರ.ಸಂ	ವಿಧಾನ ಸಭಾ ಕ್ಷೇತ್ರ	ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ		
		2011–12	2012–13	2013–14
1	ಚಾಮರಾಜನಗರ	2288	971	2734
2	ಗುಂಡ್ಲುಪೇಟೆ	2346	1770	4029
3	ಕೊಳ್ಳೇಗಾಲ	1963	1357	4385
4	ಹನೂರು	2097	1858	4100
	ಒಟ್ಟು	**8694**	**5956**	**15248**

ಚಾಮರಾಜನಗರ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳು ಕುಂಠಿತಗೊಂಡಿರುವುದಿಲ್ಲ. ಕಳೆದ 2 ವರ್ಷಗಳಲ್ಲಿ ಕೈಗೊಂಡಿರುವ ಒಟ್ಟು 21204 ಕಾಮಗಾರಿಗಳ ಪೈಕಿ 4675 ಕಾಮಗಾರಿಗಳು ಮುಕ್ತಾಯಗೊಂಡಿದ್ದು, ಉಳಿದ 16529 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಆ) ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

ಶ್ರೀ ನರೇಂದ್ರ ಆರ್: ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಮೊದಲನೆಯ ಪ್ರಶ್ನೆಯಲ್ಲಿ ಎಷ್ಟು ಕಾಮಗಾರಿಗಳನ್ನು ನಮ್ಮ ಜಿಲ್ಲೆಯಲ್ಲಿ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೆ. ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಈ ಕಾಮಗಾರಿಗಳು ಕಳೆದ ಎರಡು ವರ್ಷಗಳಿಂದ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಕೇಳಿದ್ದೇನೆ. ಕುಂಠಿತವಾಗಿಲ್ಲವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಈಗ ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಕಳೆದ ಎರಡು ವರ್ಷಗಳಿಂದ ತೆಗೆದುಕೊಂಡಿರತಕ್ಕಂಥ ಕೆಲಸ 21204 ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಪೂರ್ಣ ಮಾಡಿರುವುದು ಕೇವಲ 4675 ಕಾಮಗಾರಿಗಳನ್ನು ಮಾತ್ರ. ಇನ್ನು ಇರತಕ್ಕಂಥದ್ದು ಕೇವಲ 1 ತಿಂಗಳು ಮಾತ್ರ. ಒಂದು ತಿಂಗಳೊಳಗೆ ಇವರು ಹೇಗೆ ಹದಿನಾರು ಸಾವಿರ ಕಾಮಗಾರಿಗಳನ್ನು ಮುಗಿಸುತ್ತಾರೆ ಎನ್ನತಕ್ಕಂಥದ್ದು ನನ್ನ ಪ್ರಶ್ನೆ. ನನಗೆ ಇರುವ ಮಾಹಿತಿ ಪ್ರಕಾರ ಕೆಲವು ಕಾಮಗಾರಿಗಳು ಇನ್ನು ಶುರವೇ ಆಗಿಲ್ಲ. ಇದು ಒಳ್ಳೆಯ ಯೋಜನೆಯಾಗಿದೆ. ಇಂಥ ಒಳ್ಳೆಯ ಯೋಜನೆಯ ಸದುಪಯೋಗವನ್ನು ನಾವು ಪಡೆದುಕೊಳ್ಳಲಿಲ್ಲವೆಂದರೆ ಮುಂದೆ ಬಹಳ ಕಷ್ಟವಾಗುತ್ತದೆ. ಆದುದರಿಂದ ದಯವಿಟ್ಟು ಈ ಕಾರ್ಯಕ್ರಮಗಳನ್ನು ಬೇಗ ಮುಗಿಸಬೇಕು. ಇದಕ್ಕೆಲ್ಲಾ ಕಾರಣ ಈ ಪಿ.ಡಿ.ಒ.ಗಳ ಅಭಾವ ಇರತಕ್ಕಂಥದ್ದು. ಸೆಕ್ರೆಟರಿಗಳ ಅಭಾವ ಇರತಕ್ಕಂಥದ್ದು, ಮತ್ತೆ ಡಿಪಾರ್ಟ್‌ಮೆಂಟ್‌ನ ಇ.ಒ. ಗಳು ಇಲ್ಲದೇ ಇರತಕ್ಕಂಥದ್ದೇ ಈ ಎಲ್ಲಾ ಕಾಮಗಾರಿಗಳು ಇಷ್ಟೊಂದು ಕುಂಠಿತವಾಗುವುದಕ್ಕೆ ಕಾರಣವಾಗುತ್ತಿದೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಸದಸ್ಯರು ಏನು ಈ ಕಾರ್ಯಕ್ರಮದ ಗಂಭೀರತೆ ಹಾಗೂ ಅವರ ಕಳಕಳಿಯನ್ನು ವ್ಯಕ್ತಮಾಡಿದ್ದಾರೆ ಅದು ಸರಿಯಿದೆ. ಈ ಕಾಮಗಾರಿಗಳೆಲ್ಲವೂ ಮುಗಿದುಬಿಟ್ಟಿದೆ ಎಂದು ನಾವೇನು ಹೇಳುವುದಿಲ್ಲ. ಆದರೆ ಕೆಲವು ಕಾಮಗಾರಿಗಳು, ಅಂದರೆ ಏನು 16 ಸಾವಿರ ಕಾಮಗಾರಿಗಳು ಉಳಿದಿವೆ ಇವುಗಳಲ್ಲಿ ಪೇಮೆಂಟ್ ಆಗದೇ ಇರತಕ್ಕಂಥ ಕಾಮಗಾರಿಗಳು

ಬಹಳ ದೊಡ್ಡ ಸಂಖ್ಯೆಯಲ್ಲಿವೆ. ಅವುಗಳನ್ನು ಆ ಪೇಮೆಂಟ್ ಆಗುವವರೆಗೆ ಆ ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆಮೇಲೆ 2013–14 ರಲ್ಲಿಯೇ 15248 ಕಾಮಗಾರಿಗಳನ್ನು ನಾವು ಕೈಗೊಂಡಿದ್ದೇವೆ. ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ ಈ ನಮ್ಮ NREG ಹಣವೇನು ಬಿಡುಗಡೆಯಾಗಬೇಕಾಗಿತ್ತೋ ಆ ಹಣ ಬಿಡುಗಡೆಯಲ್ಲಿ ಬಹಳಷ್ಟು ವಿಳಂಬವಾಗಿದೆ. ನಮಗೆ ಬರಬೇಕಾಗಿರತಕ್ಕಂಥ 1310 ಕೋಟಿ ಹಣ ಇನ್ನು ಬಿಡುಗಡೆಯಾಗಲಿಲ್ಲ. ನಾವು ಕೆಲವು ದಿವಸಗಳ ಹಿಂದೆ NREG ಹಣ ಬರಬೇಕಾಗಿದ್ದರೆ ಬಗ್ಗೆ ಅಂಕಿ ಸಂಖ್ಯೆಯನ್ನು ನಾವು ಬಿಡುಗಡೆ ಮಾಡಿದ್ದೆವು. ಆ ಸಂದರ್ಭದಲ್ಲಿ ರಾಜಕೀಯವಾಗಿ ಆ ವಿಷಯದಲ್ಲಿ ಚರ್ಚೆಯೂ ನಡೆಯಿತು. ತಿರುವನಂತಪುರದಲ್ಲಿ ಕೇಂದ್ರ ಸರ್ಕಾರದ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಒಂದು ಸಮಾವೇಶವನ್ನು ಕರೆದಿದ್ದರು. ಆ ಸಮಾವೇಶದಲ್ಲಿಯೂ ಸಹಿತ ನಮಗೆ ಬಿಡುಗಡೆ ಮಾಡಬೇಕಾಗಿರತಕ್ಕಂಥ ಹಣದ ಬಗ್ಗೆ ಅವರಿಗೆ ಆಗ್ರಹವನ್ನು ಮಾಡಿದೆವು. ಆ ಹಣ ಇನ್ನೂ ಬಿಡುಗಡೆಯಾಗಿಲ್ಲ. ಬಿಡುಗಡೆಯಾದಂಥ ಸಂದರ್ಭದಲ್ಲಿ ನಾವು ಕೆಲಸವನ್ನು ಪೂರ್ಣಗೊಳಿಸಿ ಏನು 300 ಕೋಟಿಗಿಂತಲೂ ಹೆಚ್ಚಿನ ಹಣವನ್ನು ನಾವು ಬಾಕಿ ತೀರಿಸಬೇಕಾಗಿದೆ. ಅಲ್ಲಿಯವರೆವಿಗೆ ಈ ಕಾಮಗಾರಿಗಳು ಪೂರ್ಣಗೊಂಡಿರತಕ್ಕಂಥದ್ದನ್ನು ಸಹಿತ ನಾವು ಪೂರ್ಣಗೊಂಡಿದೆಯೆಂದು ನಮ್ಮ MIS ನಲ್ಲಿ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಈ ಸಂಖ್ಯೆ ದೊಡ್ಡದಿದೆ. ಆದರೆ ಕಾಮಗಾರಿಗಳೇನಾದರೂ ಉಳಿದಿದ್ದರೆ ಅವುಗಳನ್ನು ಪೂರ್ಣಗೊಳಿಸುವುದಕ್ಕೆ ಎಲ್ಲ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಾನು ಈ ವೇದಿಕೆಯನ್ನು ಉಪಯೋಗ ಮಾಡಿಕೊಂಡು ತಮ್ಮ ಮುಖಾಂತರ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರಕ್ಕೆ ಆಗ್ರಹ ಮಾಡುತ್ತೇನೆ. ಕೇಂದ್ರ ಸರ್ಕಾರ 1,310 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಬೇಕಾಗಿರುವುದಿದ್ದು, ನಾವು ಈಗಾಗಲೇ 100% Utilization Certificate ಕಳುಹಿಸಬೇಕಾಗಿತ್ತು, ಅದನ್ನು ಕಳುಹಿಸಿದ್ದೇವೆ. ನಮ್ಮಿಂದ ಏನು ಕೊಡಬೇಕಾಗಿತ್ತು, ಕಳುಹಿಸಬೇಕಾಗಿದ್ದು, ಸಲ್ಲಿಸಬೇಕಾಗಿದ್ದು ಏನೂ ಬಾಕಿಯಿಲ್ಲ. ಈ ಹಣವನ್ನು

ನೀವು ಬಿಡುಗಡೆ ಮಾಡದೇ ಹೋದರೆ ನಮಗೆ ಫೆಬ್ರವರಿಯಲ್ಲಿ 15 ದಿವಸ ಮಾತ್ರ ಉಳಿದಿದೆ ಮತ್ತು ಮಾರ್ಚ್‌ನಲ್ಲಿ 15–20 ದಿವಸ ಕೆಲಸಕ್ಕೆ ಉಳಿಯುತ್ತದೆ. ಈ ಸಮಯದಲ್ಲಿ ನಾವು ಹಣ ಖರ್ಚು ಮಾಡುವುದು. ಹಾಗಾಗಿ ಬಾಕಿ ಹಣ ಏನು ಕೊಡಬೇಕಾಗಿದೆ ಅದಕ್ಕೆ ಹೆಚ್ಚು ಒತ್ತಡ ಬರುತ್ತದೆ. ಹಾಗಾಗಿ ಕೇಂದ್ರ ಸರ್ಕಾರ NREG ಮಹತ್ವವನ್ನು ಅರ್ಥ ಮಾಡಿಕೊಂಡು ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕೆಂದು ಅವರಲ್ಲಿ ಅಗ್ರಹ ಮಾಡುತ್ತೇನೆ.

ಶ್ರೀ ಆರ್. ನರೇಂದ್ರ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ ಹಾಗೆ 2–3 ವರ್ಷಗಳಿಂದ ಈ ಕಾರ್ಯಕ್ರಮಕ್ಕೆ ಹಣವನ್ನು ಕೊಟ್ಟಿಲ್ಲ. ಏಕೆ ನಮ್ಮ ಜಿಲ್ಲೆಯಲ್ಲಿ ಈ ಕಾಮಗಾರಿಗಳು ಉಳಿದುಕೊಂಡಿವೆ ಎಂದರೆ ಇವತ್ತು ಕಾಮಗಾರಿಗಳನ್ನು ಕೊಟ್ಟರೂ ಕೂಡ ಇವತ್ತು ಜನರು ಕೆಲಸಕ್ಕೆ ಬರುತ್ತಿಲ್ಲ. ಕಾರಣವೇನೆಂದರೆ ಒಂದೆರಡು ವರ್ಷಗಳಿಂದ ಅವರು ಮಾಡಿರುವ ಕೆಲಸಕ್ಕೆ ಕೂಲಿಯನ್ನು ಕೊಟ್ಟಿಲ್ಲ. ಅದಕ್ಕೋಸ್ಕರ ಇಷ್ಟು ಕೆಲಸಗಳು ಮಂಜೂರಾಗಿದ್ದರೂ ಕೂಡ ಜನರು ಕೆಲಸಕ್ಕೆ ಬರದೇ ಈ ಕಾಮಗಾರಿಗಳು ಉಳಿದುಕೊಂಡಿವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಉಪಾಧ್ಯಕ್ಷರೆ, ಉದ್ಯೋಗ ಖಾತ್ರಿ ಯೋಜನೆಯಲ್ಲಿ computer ಗೂ enter ಆಗದೆ, ನಮ್ಮ ತಾಲ್ಲೂಕಿನಲ್ಲಿ ಸುಮಾರು ಎರಡು ಕೋಟಿ ರೂಪಾಯಿಯ ಕೆಲಸ ಮಾಡಬೇಕು. ಆದರೆ ಅದು ಕಾನೂನು ಪರವಾಗಿ ಆಗಿಲ್ಲ. ಸಾಮಾನ್ಯ ಜನರೆಲ್ಲ ಕೆಲಸ ಮಾಡಿ ವಿಷ ತೆಗೆದುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಅದರ ಬಗ್ಗೆ ವರದಿ ತರಿಸಿ ಸರ್ಕಾರ ಏನು ಮಾಡಬಹುದು ಎಂದು ತಾವು ಆಲೋಚನೆ ಮಾಡಿ. ಆ ರೀತಿಯ ಕಾಮಗಾರಿ ಯಾವ ಕಾರಣಕ್ಕೆ ಆಯಿತು? ಯಾವ ಕಾರಣಕ್ಕೆ ಮಾಡಿಸಿದರು? ಏಕೆ ಮಾಡಿದರು ಎಂದು ವರದಿಯನ್ನು ತರಿಸಿಕೊಂಡು ಪುನರ್ ಪರಿಶೀಲನೆ ಮಾಡಿ ಆ ಕಾಮಗಾರಿ ಮಾಡಿರುವ ಸಣ್ಣಪುಟ್ಟ ರೈತರನ್ನು ರಕ್ಷಣೆ ಮಾಡಬೇಕು.